ಹಣ ಕೊಟ್ಟು ಕೊಂಡುಕೊಳ್ಳುವುದರಲ್ಲಿ ಹಿಂದುಮುಂದು ನೋಡುವುದು ಸರಿಯಲ್ಲ. ಮಾರ್ಕೆಟ್ ವ್ಯಾಲ್ಯೂ ಏನೇ ಇರಲಿ ನ್ಯಾಯವಾದಂಥ ಬೆಲೆ ಕೊಟ್ಟು ಬಸ್ ನಿಲ್ದಾಣ ಕಟ್ಟಿಸುವುದಕ್ಕೆ ತಕ್ಷಣ ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಪಿ. ಜಿ. ಆರ್. ಸಿಂಧ್ಯ.—ಮಾನ್ಯ ಉಪಾಧ್ಯಕ್ಷರೇ, ಈಗಾಗಲೇ ಈ ವಿಚಾರದಲ್ಲಿ ಮಾನ್ಯ ಸದಸ್ಯರು ನನ್ನ ಜೊತೆಯಲ್ಲಿ ಮಾತನಾಡಿದ್ದಾರೆ ಅಧಿವೇಶನದ ನಂತರ ಶಿವಮೊಗ್ಗಕ್ಕೆ ಹೋದಾಗ ಮುನಿಸಿಪಾಲಿಟಿ ಅಧ್ಯಕ್ಷರನ್ನು ಮತ್ತಿತರರನ್ನು ಭೇಟಿ ಮಾಡಿ ಆ ಜಾಗದ ಬಗ್ಗೆ ತೀರ್ಮಾನ ಮಾಡಿ, ಸಾಧ್ಯವಾದರೆ ಈ ವರ್ಷವೇ ಕಟ್ಟಿಸಿಕೊಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಕನಿಷ್ಠ ವೇತನದ ಬಗ್ಗೆ

(೨೦೬) ಶ್ರೀ ಬಿ. ಎಂ. ಇದಿನಬ್ಬ (ಉಳ್ಳಾಲ).—ಮಾನ್ಯ ಕಾರ್ಮಿಕ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ದಕ್ಷಿಣ ಕನ್ನಡ ಜಿಲ್ಲೆಯ ಹೆಂಚಿನ ಉದ್ದಿಮೆಯಲ್ಲಿ ದುಡಿಯುವ ಕಾರ್ಮಿಕ ತುಟ್ಟಿಭತ್ಯ ಸಮೇತ ಕನಿಷ್ಠ ವೇತನದ ಪ್ರಕಟನೆಯು ವಿಳಂಬಕ್ಕೆ ಕಾರಣಗಳೇನು ?

ಆ) ಈ ವಿಳಂಬದಿಂದ ತೊಂದರೆಯಾಗುವ ಕಾರ್ಮಿಕರ ಸಂಖ್ಯೆಯೆಷ್ಟು ?

ಇ) ಈ ಬಗ್ಗೆ ಸಮಿತಿಯನ್ನು ರಚಿಸಲಾಗಿದೆಯೆ ? ಆ ಸಮಿತಿಯಲ್ಲಿ ಸದಸ್ಯರು ಯಾರು ? ಹಾಗೂ ಸಮಿತಿಯು ವರದಿ ಬಂದಿದೆಯೇ ?

ಈ) ಕನಿಷ್ಠ ವೇತನದ ಪ್ರಕಟಣೆ ಯಾವಾಗ ಮಾಡಲಾಗುವುದು ?

ಶ್ರೀ ಡಿ. ಮಂಜುನಾಥ್ (ಕಾರ್ಮಿಕ ಮಂತ್ರಿಗಳು).—

ಅ) ೧೯೮೧ನೇ ಸಾಲಿನಲ್ಲಿ ಸರ್ಕಾರವು ಹೆಂಚು ಉದ್ದಿಮೆಯಲ್ಲಿ ದುಡಿಯುವವರ ಕನಿಷ್ಠ ವೇತನವನ್ನು ನಿಗಧಿ ಪಡಿಸುವ ಸಲುವಾಗಿ ಪ್ರಸ್ತಾವನೆಯನ್ನು ಪ್ರಕಟಿಸಲಾಗಿತ್ತು. ಮೇಲ್ಕಂಡ ಪ್ರಸ್ತಾವನೆಯನ್ನು ಸರ್ಕಾರ ದಿನಾಂಕ ೧೨-೨-೮೫ರಂದು ವಾಪಸ್ ತೆಗೆದುಕೊಂಡಿದೆ.

ಈ ಮಧ್ಯೆ ಸರ್ಕಾರವು ಹೆಂಚು ಮತ್ತು ಇಟ್ಟಿಗೆ ಕಾರ್ಖಾನೆಗಳಲ್ಲಿ ದುಡಿಯುವ ಕಾರ್ಮಿಕರ ಸಮಸ್ಯೆಗಳನ್ನು ಅಧ್ಯಯನ ಮಾಡಿ ವೇತನ ನಿಗದಿಪಡಿಸುವ ಸಲುವಾಗಿ ಶಿಫಾರಸ್ಸು ಮಾಡಲು ಕನಿಷ್ಠ ವೇತನ ಕಾಯಿದೆಯ ಅನ್ವಯ ಕರ್ನಾಟಕ ಸರ್ಕಾರದ ಅಧಿಸೂಚನೆ (ಗೆಜೆಟ್) ನಂ. ಎಸ್‌ಡಬ್ಲ್ಯು ಎಲ್ ೩೩ ಎಲ್‌ಎಂಡಬ್ಲ್ಯು ೮೪ ದಿನಾಂಕ ೨೩-೬-೮೪ರಲ್ಲಿ ಸಮಿತಿಯನ್ನು ರಚಿಸಿತು. ಆದರೆ ಸರ್ಕಾರವು ಮೇಲ್ಕಂಡ ಸಮಿತಿಯನ್ನು ಪ್ರಕಟಣೆ ನಂ. ಎಸ್‌ಡಬ್ಲ್ಯು ಎಲ್ ೩೩ ಎಲ್‌ಎಂಡಬ್ಲ್ಯು ೮೪ ದಿನಾಂಕ ೨೬-೨-೮೫ರಂದು ವಿಸರ್ಜಿಸಿತು.

ಪ್ರಸ್ತುತದಲ್ಲಿ ಸರ್ಕಾರವು ಹೆಂಚಿನ ಉದ್ದಿಮೆಯಲ್ಲಿ ದುಡಿಯುವ ಕಾರ್ಮಿಕರಿಗೆ ಕನಿಷ್ಠ ವೇತನವನ್ನು ಹಾಗೂ ತುಟ್ಟಿಭತ್ಯವನ್ನು ನಿರ್ಧರಿಸುವ ದಿಶೆಯಲ್ಲಿ ಕನಿಷ್ಠ ವೇತನ ಕಾಯಿದೆಯ ಅನ್ವಯ ಪ್ರಸ್ತಾವನೆಯನ್ನು ಸದ್ಯದಲ್ಲಿಯೇ ಪ್ರಕಟಿಸಲಿದೆ.

ಆ) ಸುಮಾರು ೧೦,೦೦೦ ಕಾರ್ಮಿಕರು.

ಇ) ಇಲ್ಲ.

ಈ) ಕರಡು ಪ್ರಸ್ತಾವನೆಯನ್ನು ಸದ್ಯದಲ್ಲಿಯೇ ಪ್ರಕಟಿಸಲಾಗುವುದು.

ಶ್ರೀ ಬಿ. ಎಂ. ಇದಿನಬ್ಬ.—ಮಾನ್ಯ ಅಧ್ಯಕ್ಷರೇ, ೧೯೮೧ನೇ ಇಸವಿಯಿಂದಲೂ ಈ ಒಂದು ಉದ್ದಿಮೆಯಲ್ಲಿ ದುಡಿಯುವವರ ಬಗ್ಗೆ ಪ್ರಸ್ತಾಪವಾಗುತ್ತಲೇ ಇದೆ. ಸಮಿತಿಯನ್ನು ೨೩-೬-೮೪ರಲ್ಲಿ ರಚಿಸಿ, ೨೬-೨-೮೫ರಲ್ಲಿ ವಿಸರ್ಜಿಸಲಾಗಿದೆಯೆಂದು ಹೇಳಿದ್ದಾರೆ. ಇದಕ್ಕೆ ಕಾರಣವೇನು ?

ಶ್ರೀ ಡಿ. ಮಂಜುನಾಥ್.—ಮಾನ್ಯ ಅಧ್ಯಕ್ಷರೇ, ಹೆಂಚು ಮತ್ತು ಇಟ್ಟಿಗೆ ಉದ್ದಿಮೆಗಳಲ್ಲಿ ಕೆಲಸ ಮಾಡುವಂಥ ಕೆಲಸಗಾರರಿಗೆ ಕನಿಷ್ಠವೇತನ ನಿಗದಿಪಡಿಸುವ ಬಗ್ಗೆ ಕಾನೂನು ಇಲಾಖೆಯ ಒಪ್ಪಿಗೆ

ಕೇಳಲಾಗಿತ್ತು. ಹೆಂಚಿನ ಕೆಲಸಗಾರರ ಬಗ್ಗೆ ಕನಿಷ್ಟ ವೇತನ ನಿಗದಿ ಮಾಡುವ ಸಲುವಾಗಿ ಸಮಿತಿಯನ್ನು ನೇಮಕ ಮಾಡಲಾಗಿತ್ತು. ಇಟ್ಟಿಗೆ ಕೆಲಸಗಾರರಿಗೆ ಹೊಸದಾಗಿ ಮಾಡಬೇಕಾಗಿರುವುದರಿಂದ ಬೇಡ ಎಂದು ಹೇಳಿದ್ದರಿಂದ ವಿಸರ್ಜನೆ ಮಾಡಲಾಯಿತು.

ಶ್ರೀ ಬಿ. ಎಂ. ಇದಿನಬ್ಬ.—ಸುಮಾರು ೧೦ ೨೦೦ ಜನ ಮಜೂರಿದಾರರು ಇದ್ದು, ಮುಷ್ಕರ ವಾಗುತ್ತಿದೆ. ತಾವು ಕೇಳಿರಬಹುದು, ಪತ್ರಿಕೆಗಳಲ್ಲಿಯೂ ಬಂದಿದೆ ಅವರೆಲ್ಲಾ ಇವತ್ತು ತೊಂದರೆ ಯಲ್ಲಿದ್ದಾರೆ. ಆದಷ್ಟು ಬೇಗ ಈ ಸಮಸ್ಯೆಯನ್ನು ಬಗೆಹರಿಸುತ್ತೀರಾ ? ಸಮಿತಿಯಲ್ಲಿ ಯಾರು ಯಾರಿದ್ದಾರೆನ್ನುವುದನ್ನು ಹೇಳುತ್ತೀರಾ ?

ಶ್ರೀ ಡಿ. ಮಂಜುನಾಥ್.—ಹೆಂಚಿನ ಕೆಲಸಗಾರರ ಬಗ್ಗೆ ಇನ್ನೊಂದು ಸಮಿತಿ ಬೇಕಾಗಿಲ್ಲ. ಮಿನಿಮಮ್ ಆಡ್ವೈಸರಿ ಬೋರ್ಡ್ ಇದೆ. ಹಳೇ ಮೈಸೂರು ಭಾಗದಲ್ಲಿ ಎಂಟು ಗಂಟೆಗಳ ಕಾಲ ಕೆಲಸ ಮಾಡುತ್ತಿದ್ದಾರೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ೧೦೮ ಹೆಂಚಿಗೆ ೧೦೦೦ ಹೆಂಚಿಗೆ ಇಷ್ಟು ಎಂದು ಮಜೂರಿ ಕೊಡುತ್ತಿದ್ದಾರೆ. ಇದರ ಬಗ್ಗೆ ಸ್ಪಷ್ಟ ಮಾಡಿ ಜಾಗ್ರತೆ ಬಗೆಹರಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್.—೧೯೮೦ನೇ ಇಸವಿಯಲ್ಲಿ ಹಂಚಿನ ಉದ್ದಿಮೆಯಲ್ಲಿ ಇರುವಂಥ ಕೆಲಸಗಾರರ ಬಗ್ಗೆ ರಾಜ್ಯ ಸರ್ಕಾರ ಕನಿಷ್ಟವೇತನ ನಿಗದಿ ಮಾಡಿರಲ್ಲವೆ ? ಜೊತೆಗೆ ತುಟ್ಟಿಭತ್ಯ ಕೊಡ ಬೇಕೆಂದು ನಿರ್ಧಾರ ಮಾಡಿರಲಿಲ್ಲವೆ ? ೧೯೧ ರಿಂದ ಕಾರ್ಮಿಕರ ಕಾನೂನಿನ ಜಂಜಾಟದಿಂದ ಅಲ್ಲಿನ ನೌಕರರು ತುಂಬಾ ತೊಂದರೆಗೆ ಒಳಪಟ್ಟಿದ್ದಾರೆ. ೧೯೮೦ನೇ ಇಸವಿಯಿಂದಲೇ ಕಾನೂನು ಜಾರಿಗೆ ಬರುವಂತೆ ಮಾಡುವುದಕ್ಕೆ ಏನು ಕ್ರಮ ತೆಗೆದುಕೊಂಡಿದ್ದೀರಿ ?

ಶ್ರೀ ಡಿ. ಮಂಜುನಾಥ್.—ಕನಿಷ್ಟವೇತನ ನಿಗದಿಮಾಡಿರುವ ಪ್ರಕಾರ ಕೊಟ್ಟಿದ್ದಾರೆ. ಡಿ. ಎ. ರಿವಿಷನ್ ಬಗ್ಗೆ ಪ್ರಶ್ನೆ ಇದೆ. ಮಿನಿಮಮ್ ಆಡ್ವೈಸರಿ ಬೋರ್ಡಿನಲ್ಲಿ ಡಿಸ್ಟ್ರಿಕ್ಟ್ ಜಡ್ಜ್ ಒಬ್ಬರು ಇದ್ದರು ಅವರು ರಾಜೀನಾಮೆ ಕೊಟ್ಟಿದ್ದಾರೆ. ಮೊನ್ನೆತಾನೇ ಹೊಸದಾಗಿ ನೇಮಕ ಮಾಡಲಾಗಿದೆ. ಸಮಿತಿ ಮೀಟಿಂಗ್ ಕರೆಸಿ ಚರ್ಚೆ ಮಾಡಿ ನೋಟಿಫಿಕೇಷನ್ ಹೊರಡಿಸುವುದಕ್ಕೆ ಪ್ರಯತ್ನ ಮಾಡಲಾಗುವುದು.

ಶ್ರೀ ಆರ್. ವೆಂಕಟರಾಮಯ್ಯ.—ಆ ಸಮಿತಿಯನ್ನು ಸ್ವಲ್ಪ ಬೇಗನೆ ಮಾಡಿ. ಏಕೆಂದರೆ ಮೂರು ನಾಲ್ಕು ತಿಂಗಳಿಂದ ಹಾಗೆಯೇ ಉಳಿದಿದೆ. ೧೯ ರಿಂದ ಈ ಹೋರಾಟ ನಡೆಯುತ್ತಿರುವುದು. ೧೯ ರಿಂದ ರಿವಿಷನ್ ಆಗಿಲ್ಲ. ಹೋರಾಟ ಮಾಡುತ್ತಲೇ ಇದ್ದಾರೆ. ಸಮಿತಿ ಮಾಡಿ ತೀರ್ಮಾನ ಮಾಡುತ್ತೇವೆ ಎಂದು ಹೇಳಿದ್ದೀರಿ. ಸಮಿತಿ ಮಾಡಿ ತೀರ್ಮಾನ ಆದಾಗ ಮತ್ತೆ ಹೈಕೋರ್ಟ್‌ನಿಂದ ಸ್ಟೇ ತೆಗೆದು ತೊಂಡು ಬಂದರು. ಆದು ತಪ್ಪಾಗಿಲ್ಲಾ ಗೊತ್ತಿದೆ. ಅವತ್ತಿನಿಂದ ಇವತ್ತಿನವರೆಗೂ ಕಾರ್ಮಿಕರಿಗೆ ಬಹಳ ಅನ್ಯಾಯವಾಗಿದೆ. ದಯವಿಟ್ಟು ಒಂದು ಸಮಿತಿಯನ್ನು ಆದಷ್ಟು ಬೇಗ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಡಿ. ಮಂಜುನಾಥ್.—ಈಗಾಗಲೇ ಡಿಸ್ಟ್ರಿಕ್ಟ್ ಜಡ್ಜ್‌ನ್ನು ಅಧ್ಯಕ್ಷರನ್ನಾಗಿ ನೇಮಿಸಿದ್ದೇವೆ. ಆದಷ್ಟು ಜಾಗ್ರತೆ ಅವರ ಮೀಟಿಂಗ್ ಕರೆದು ಇನ್ನೊಂದು ತಿಂಗಳೊಳಗಾಗಿ ತೀರ್ಮಾನ ಮಾಡಿಸುತ್ತೇನೆ ಎಂದು ಹೇಳುತ್ತೇನೆ.

ಶ್ರೀ ಬಿ. ಎಂ. ಇದಿನಬ್ಬ.—ಹತ್ತು ಸಾವಿರ ಕಾರ್ಮಿಕರು ಇವ್ವ ದಿನನಿತ್ಯ ಜಾತಾ ಮತ್ತು ಧರಣಿ ನಡೆಯುತ್ತಿದೆ ಆದಷ್ಟು ಬೇಗ ಒಂದು ತಿಂಗಳೊಳಗಾಗಿ ಈ ಸಮಸ್ಯೆಯನ್ನು ಇತ್ಯರ್ಥ ಮಾಡುತ್ತೇವೆ ಎಂದು ಭರವಸೆ ಕೊಟ್ಟರೆ ಬಹಳ ಒಳ್ಳೆಯದಾಗುತ್ತದೆ.

ಶ್ರೀ ಡಿ. ಮಂಜುನಾಥ್.—ಒಂದು ತಿಂಗಳೊಳಗಾಗಿಯೇ ಮಾಡುತ್ತೇನೆ ಎಂದು ಭರವಸೆ ಕೊಡು ತ್ತೇನೆ. ಸೌತ್ ಕೆನರಾದಿಂದ ಕಾರ್ಮಿಕ ಮುಖಂಡರು ಬಂದಿದ್ದರು ಇದಕ್ಕಾಗಿ ಒಂದು ಸಪರೇಟ್ ಸಮಿತಿ ಮಾಡಿ ಎಂದು ಹೇಳುತ್ತಾರೆ. ಸಪರೇಟ್ ಸಮಿತಿ ಮಾಡುವ ಅವಶ್ಯಕತೆ ಇಲ್ಲ ಎಂದು ನನಗನ್ನಿಸುತ್ತದೆ. ಪರಿಶೀಲನೆ ಮಾಡುತ್ತೇನೆ. ಆ ರೀತಿ ಅವಶ್ಯಕತೆ ಇದ್ದರೆ ಪ್ರತ್ಯೇಕವಾಗಿ ಸಮಿತಿ ಮಾಡಿ ಎಲ್ಲ ಕಡೆ ಹೋಗಿ ಅಧ್ಯಯನ ಮಾಡಿ ಇದರ ಬಗ್ಗೆ ಒಂದು ಸಮರ್ಪಕವಾದ ತೀರ್ಪು ಕೊಡು ವುದಕ್ಕೆ ಏರ್ಪಾಡು ಮಾಡುತ್ತೇನೆ.